ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಸಚಿವರು) ಶ್ರೀ ಬಿ.ಬಿ. ನಿಂಗಯ್ಯ (ಪಶು ಸಂಗೋಪನಾ ರಾಜ್ಯ ಸಚಿವರು) ಅವರು :—

1984ರ ಕರ್ನಾಟಕ ವೆಟರಿನರಿ ಕೌನ್ಸಿಲ್ ಅಧಿನಿಯಮದ 65(3)ನೇ ಪ್ರಕರಣದ ಮೇರೆಗೆ :

67. 1988ರ ಕರ್ನಾಟಕ ವೆಟರಿನರಿ ಕೌನ್ಸಿಲ್ ನಿಯಮಾವಳಿಗಳನ್ನು ರಚಿಸುವ ಸಂಬಂಧದಲ್ಲಿ ದಿನಾಂಕ 2-6-1998ರಂದು ಹೊರಡಿಸಲಾದ ಎಹೆಚ್‌ಎಫ್ 210 ವೀಟಿ 94ನೇ ಕ್ರಮಾಂಕದ ಅಧಿಸೂಚನೆ;

(6) ವರದಿಗಳನ್ನು ಒಪ್ಪಿಸುವುದು :

ಶ್ರೀ ಜಿ.ಬಿ. ಶಿವಕುಮಾರ್ (ಅಧ್ಯಕ್ಷರು, ಜಂಟಿ ಸದನ ಸಮಿತಿ) :— ರಾಜ್ಯಾದ್ಯಂತ ಬೆಳೆಗಳು ನಾಶವಾಗಿ ರೈತರು ಆತ್ಮಹತ್ಯೆ ಮಾಡಿಕೊಂಡರೆಂಬ ಬಗ್ಗೆ ಪರಿಶೀಲಿಸಿ ವರದಿ ಸಲ್ಲಿಸಲು ರಚಿಸಲಾದ ಜಂಟಿ ಸದನ ಸಮಿತಿಯ ಅಂತಿಮ ವರದಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ :— ಸನ್ಮಾನ್ಯ ಅಧ್ಯಕ್ಷರೆ, ಜಂಟಿ ಸದನ ಸಮಿತಿ ಸದಸ್ಯನಾದ ನಾನು ತುಮಕೂರು ಜಿಲ್ಲೆ ಶಿರಾ ಪಟ್ಟಣದ ಕೃಷಿ ಉತ್ಪನ್ನ ಮಾರುಕಟ್ಟೆಯ ಆವರಣದಲ್ಲಿ ರೈತರ ಮೇಲೆ ನಡೆದ ಗೋಲಿಬಾರ್ ನಿಂದಾಗಿ ಉಂಟಾದ ಸಾವು ನೋವುಗಳ ಬಗ್ಗೆ ಪರಿಶೀಲಿಸಿ ಇಂಥ ಘಟನೆ ಇನ್ನು ಮುಂದೆ ಮರುಕಳಿಸದಂತೆ ಪರಿಹಾರೋಪಾಯಗಳನ್ನು ಸೂಚಿಸಿ ವರದಿ ಸಲ್ಲಿಸಲು ರಚಿಸಲಾಗಿರುವ ಜಂಟಿ ಸದನ ಸಮಿತಿಯ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಶ್ರೀ ಸಿ.ಎಸ್. ಪುಟ್ಟೇಗೌಡ (ಅಧ್ಯಕ್ಷರು, ಅಂದಾಜುಗಳ ಸಮಿತಿ) :— ಮಾನ್ಯ ಅಧ್ಯಕ್ಷರೆ, ಲೋಕೋಪಯೋಗಿ ಇಲಾಖೆ ಹಾಗೂ ಆರ್ಥಿಕ ಇಲಾಖೆಗಳಿಗೆ ಸಂಬಂಧಿಸಿದಂತೆ ಕ್ರಮವಾಗಿ ಮೂರು ಮತ್ತು ನಾಲ್ಕನೇ ವರದಿಗಳನ್ನು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು :— ಎಲ್ಲಾ ವರದಿಗಳನ್ನು ಸಭೆಗೆ ಒಪ್ಪಿಸಲಾಯಿತು.

(7) ಪ್ರಕಟಣೆ.

ಅಧ್ಯಕ್ಷರು :— ದಿನಾಂಕ 8ನೇ ಮಾರ್ಚ್ 1999ರಂದು ನಡೆದ ವಿಧಾನ ಸಭೆಯ ಕಾರ್ಯಕಲಾಪಗಳ ಸಲಹಾ ಸಮಿತಿಯು ದಿನಾಂಕ 9ನೇ ಮಾರ್ಚ್ 1999 ರಿಂದ 31ನೇ ಮಾರ್ಚ್ 1999ರವರೆಗೆ ಈ ಕೆಳಕಂಡಂತೆ ಕಾರ್ಯಕಲಾಪಗಳನ್ನು ನಡೆಸಲು ತೀರ್ಮಾನಿಸಿತು.

ದಿನಾಂಕ : 9.3.1999	1)	ಪ್ರಶ್ನೋತ್ತರ
ರಿಂದ 11.3.1999 ರವರೆಗೆ	2)	ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲೆ ಚರ್ಚೆ
	3)	ಖಾಸಗಿ ಕಾರ್ಯಕಲಾಪಗಳು
ದಿನಾಂಕ : 12.3.99	1)	ಪ್ರಶ್ನೋತ್ತರ
	2)	ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲೆ ಚರ್ಚೆ
	3)	ಖಾಸಗಿ ಕಾರ್ಯಕಲಾಪಗಳು
ದಿನಾಂಕ 15.3.1999	1)	ಪ್ರಶ್ನೋತ್ತರ
	2)	ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲೆ ಚರ್ಚೆ
ದಿನಾಂಕ 16.3.1999	1)	ಪ್ರಶ್ನೋತ್ತರ
	2)	ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಚರ್ಚೆಗೆ ಉತ್ತರ.
ದಿನಾಂಕ 17.3.1999		1999-2000ನೇ ಸಾಲಿನ ಆಯವ್ಯಯ ಮಂಡನೆ (ಬೆಳಿಗ್ಗೆ 11.00 ಗಂಟೆಗೆ)
ದಿನಾಂಕ 18.3.1999 ರಿಂದ 21.3.1999 ರವರೆಗೆ		ಅಧಿವೇಶನ ವಿರುವುದಿಲ್ಲ.
ದಿನಾಂಕ 22.3.1999 ರಿಂದ 25.3.1999 ರವರೆಗೆ	1.	ಪ್ರಶ್ನೋತ್ತರ
	2.	1999-2000ನೇ ಸಾಲಿನ ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆ.

ದಿನಾಂಕ 27.3.1999	1.	1999-2000ನೇ ಸಾಲಿನ ಆಯವ್ಯಯದ ಮೇಲೆ ನಡೆದ ಚರ್ಚೆಗೆ ಸರ್ಕಾರದಿಂದ ಉತ್ತರ.
	2.	ಪೂರಕ ಅಂದಾಜುಗಳನ್ನು ಮಂಡಿಸುವುದು, ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು.
	3.	ವಿತ್ತೀಯ ಕಾರ್ಯಕಲಾಪ ಧನವಿನಿಯೋಗ ವಿಧೇಯಕ ಹಾಗೂ
ತರಿಗೆ		ವಿಧೇಯಕಗಳನ್ನು ಅಂಗೀಕರಿಸುವುದು.
ದಿನಾಂಕ 30.3.1999 ರಿಂದ 31.3.1999ರವರೆಗೆ	1.	ಪ್ರಶ್ನೋತ್ತರ
	2.	ಶಾಸನ ರಚನೆ ವಿಧೇಯಕಗಳನ್ನು ಪರ್ಯಾಲೋಚಿಸುವುದು. ಹಾಗೂ ಅಂಗೀಕರಿಸುವುದು

ಈ ಶಿಫಾರಸ್ಸುಗಳನ್ನು ಸದನವು ಅಂಗೀಕರಿಸಿದೆಯೆಂದು ಭಾವಿಸುತ್ತೇನೆ.

ಅಧ್ಯಕ್ಷರು :— ಈಗ ರಾಜ್ಯಪಾಲರ ಭಾಷಣಕ್ಕೆ ಸಂಬಂಧಪಟ್ಟ ವಂದನಾರ್ಪಣಾ ಪ್ರಸ್ತಾವ.

ಶ್ರೀ ಬಿ.ಎಸ್. ಯಡಿಯೂರಪ್ಪ :— ನಾನು ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇನೆ. ಪ್ರಶ್ನೋತ್ತರವನ್ನು ಬದಿಗೊತ್ತಿ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಬೇಕೆಂದು ಹೇಳಿದ್ದೆ.

ಅಧ್ಯಕ್ಷರು :— ಈಗ ಮೊದಲನೆಯದಾಗಿ ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ನಿಲುವಳಿ ಸೂಚನೆಗೆ ನೋಟೀಸ್ ಕೊಟ್ಟಿದ್ದಾರೆ. ಎರಡನೆಯದಾಗಿ ತಾವೂ ಸಹ ಕೊಟ್ಟಿದ್ದೀರಿ. ಅವರು ಕೊಟ್ಟಿರತಕ್ಕದ್ದು ರಾಜ್ಯದಲ್ಲಿ ಈ ಮನೆಗಳ ಹಂಚಿಕೆ ವಿಷಯ. ಆಶ್ರಯ ಮತ್ತು ಇತರೆ ಯೋಜನೆಗಳಲ್ಲಿ ಮನೆಗಳ ಹಂಚಿಕೆ ಮಾಡಿರುವುದರಲ್ಲಿ ಸ್ವಲ್ಪ ಅಸಮಾನತೆ ಆಗಿದೆ, ಇದು ಗಂಭೀರವಾದಂತಹ ವಿಚಾರವೆಂದು ಅವರು ಪ್ರಸ್ತಾಪ ಮಾಡಿದ್ದಾರೆ. ತಾವು ಗ್ರಾಮ ಪಂಚಾಯತಿಗಳ ಚುನಾವಣೆಯನ್ನು ಮುಂದೂಡಿರತಕ್ಕದ್ದು ಗಂಭೀರವಾದಂತಹ ವಿಚಾರ, ಇದನ್ನು ಚರ್ಚೆ ಮಾಡಬೇಕೆಂದು ನೋಟೀಸ್ ಕೊಟ್ಟಿದ್ದೀರಿ. ಈಗ ಹೀಗೆ ಮಾಡಿಕೊಳ್ಳೋಣ. ತಾಂತ್ರಿಕವಾಗಿ ವಿರೋಧ ಪಕ್ಷದ ನಾಯಕರು